

# ವೇದವ್ಯಾಸರಿಗೂ ಒಂದು ಮಂದಿರ

■ **ಕೆ.ರಾಮಚಂದ್ರ, ಹೊಸಪೇಟೆ.**

ದಕ್ಷಿಣ ಭಾರತದಲ್ಲಿ ವೇದವ್ಯಾಸರ ಮತ್ತು ವೇದ ಗಣಪತಿಯ ಏಕೈಕ ಮಂದಿರ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿಯ ನರಸಿಂಹ ವನದಲ್ಲಿದೆ. ತುಂಗಾನದಿಯ ಬಲದಂಡೆಯ ಪ್ರಶಾಂತ ವಾತಾವರಣದಲ್ಲಿ ಈ ಮಂದಿರವನ್ನು ನಿರ್ಮಿಸಲಾಗಿದೆ. ದೇವರನ್ನು ಶ್ಲಾಘಿಸಿದ ಮಹರ್ಷಿಗೆ ಮಂದಿರ ನಿರ್ಮಿಸಿದ ಕೀರ್ತಿ ಕರ್ನಾಟಕದ್ದು. ವ್ಯಾಸ ಮಹರ್ಷಿಗಳು ರಚಿಸಿದ 'ಐದನೆ ವೇದ'ವೆಂದು ಪ್ರಖ್ಯಾತಗೊಂಡ ಮಹಾಕಾವ್ಯ ಮಹಾಭಾರತ ಅಜರಾಮರವಾಗಿದೆ. ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ಕುವೆಂಪು ಮುಂತಾದವರಿಗೆ ಸ್ವಾರಸ್ಯಕರವಾಗಿ ಕಾವ್ಯ ರಚಿಸಲು ಸ್ಪೂರ್ತಿ ನೀಡಿದ ಮಹಾಗ್ರಂಥ ಮಹಾಭಾರತ.

ವೇದವ್ಯಾಸ ಮಂದಿರ ನಿರ್ಮಿಸುವ ಯೋಚನೆ ಅಂಕುರಿಸಿದ್ದು ಬೆಂಗಳೂರಿನ ಕುಪ್ಪಾಚಾರಿ ಕೃಷ್ಣಮೂರ್ತಿಯವರಲ್ಲಿ. ತಮ್ಮ ಆಕಾಂಕ್ಷೆಯನ್ನು ಶೃಂಗೇರಿ ಮಠದ ಭಾರತೀತೀರ್ಥ ಸ್ವಾಮೀಜಿಗೆ ತಿಳಿಸಿದರು. ಸ್ವಾಮೀಜಿ ಶೃಂಗೇರಿ ಮಠದ ನರಸಿಂಹ ವನದಲ್ಲಿ ಪ್ರಶಾಂತವಾದ ಸ್ಥಳದಲ್ಲಿ ಮಂದಿರ ನಿರ್ಮಾಣಕ್ಕೆ ಅನುಮತಿ ನೀಡಿದರು. ಕೃಷ್ಣಮೂರ್ತಿಯವರು ಸ್ವಾಮೀಜಿಯನ್ನು ಮಹಾಪೋಷಕರನ್ನಾಗಿ, ನ್ಯಾ. ಎಂ.ರಾಮಾ ಜೋಯಿಸ್, ಬಿ.ಎಸ್.ಶ್ರೀಕೃಷ್ಣ, ಆರ್.ಜಿ.ವೈದ್ಯನಾಥನ್ ಹಾಗೂ ಶಾರದಾ ಮಠದ ಕಾರ್ಯನಿರ್ವಾಹಕರನ್ನು ಸಲಹೆಗಾರರನ್ನಾಗಿ ಆಯ್ಕೆ ಮಾಡಿ ಮಹರ್ಷಿ ವೇದವ್ಯಾಸ ಜ್ಞಾನ ಪೀಠ ರಚನೆ ಮಾಡಿದರು.

ಶೃಂಗೇರಿ ಕರ್ನಾಟಕದ ಪ್ರಸಿದ್ಧ ಯಾತ್ರಾಸ್ಥಳ. ಜಗದ್ಗುರು ಶಂಕರಾಚಾರ್ಯರು ಸ್ಥಾಪಿಸಿದ ಮಠಗಳಲ್ಲಿ ಮೊದಲನೆಯದು ಇಲ್ಲಿನ ಶಂಕರಮಠ. ಇಲ್ಲಿ ಶಾರದಾಂಬೆಯ ಮೂರ್ತಿಯನ್ನು ಚಕ್ರಶಿಲೆಯ ಮೇಲೆ ತುಂಗಾನದಿಯ ಎಡದಂಡೆಯಲ್ಲಿ ಸ್ಥಾಪಿಸಿದ್ದಾರೆ. ಹಾಗೆಯೇ ವಿದ್ಯಾಶಂಕರ ದೇವಾಲಯವನ್ನೂ ಸ್ಥಾಪಿಸಿದ್ದಾರೆ. ಶಂಕರಾಚಾರ್ಯರು ಈ ಸ್ಥಳದ ಮಹತ್ವವನ್ನು ಅರಿತು ಇಲ್ಲಿ ಸುಮಾರು ಹನ್ನೆರಡು ವರ್ಷಗಳ ಕಾಲ ನೆಲೆಸಿದ್ದರು. ಇಂತಹ ಸ್ಥಳದಲ್ಲೇ ವೇದವ್ಯಾಸ ಮಂದಿರ ಸ್ಥಾಪನೆಗೆ 2005ರ ಮೇನಲ್ಲಿ ಶಂಕುಸ್ಥಾಪನೆ ಆಯಿತು. 2007ರ ಏಪ್ರಿಲ್ 4ರಂದು ಉದ್ಘಾಟನೆಯೂ ಆಯಿತು.

ಮಂದಿರವನ್ನು ಅಷ್ಟಕೋನಾಕೃತಿಯಲ್ಲಿ ಚೊಕ್ಕವಾಗಿ ಕಟ್ಟಲಾಗಿದೆ. ಮುಖ-ಮಂಟಪ ವಿಶಾಲವಾಗಿದೆ. ಪ್ರಶಾಂತ ವಾತಾವರಣ ನದಿದಂಡೆಯಲ್ಲಿ ಧ್ಯಾನ-ಕುಟೀರಗಳಿವೆ.

'ವೇದವ್ಯಾಸರ ಮುಖ್ಯ ಸಂದೇಶವೆಂದರೆ– ಸಚ್ಚಾರಿತ್ರ್ಯ ನಿರ್ಮಾಣದ್ದು. ಸಮಾಜ-ದಲ್ಲಿರುವ ಅನಿಷ್ಟ ಪದ್ಧತಿಗಳು, ಅನ್ಯಾಯ, ಅಹಿಂಸೆ, ಭ್ರಷ್ಟಾಚಾರ ಮುಂತಾದವನ್ನು ಬೇರು ಸಹಿತ ಕಿತ್ತುಹಾಕಲು ಸಚ್ಚಾರಿತ್ರ್ಯ ನೆರವು ನೀಡುತ್ತದೆ. ಸಚ್ಚಾರಿತ್ರ್ಯ ಬೆಳೆಸುವ ಶಿಕ್ಷಣವನ್ನು ಶಾಲೆ, ಕಾಲೇಜು ಹಾಗೂ ತಾಂತ್ರಿಕ ವಿದ್ಯಾಮಂದಿರಗಳಲ್ಲಿ ದೊರಕು-ವಂತಾಗಬೇಕು. ಈ ಸಂದೇಶವನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ವೇದವ್ಯಾಸರ ಮಂದಿರ ನಿರ್ಮಾಣ ಜ್ಞಾನಪೀಠ ಕೈಗೊಂಡಿದೆ' ಎನ್ನುತ್ತಾರೆ ಕೃಷ್ಣಮೂರ್ತಿ.

ಶೃಂಗೇರಿ ಶಾರದಾಂಬೆಯ ದೇವಸ್ಥಾನದಿಂದ ಅರ್ಧ ಕಿ.ಮೀ ದೂರ, ಆಚೆ ದಡದಲ್ಲಿ ವೇದವ್ಯಾಸರ ಮಂದಿರವಿದೆ. ತುಂಗಾನದಿಯ ಸೇತುವೆ ದಾಟಿ ನರಸಿಂಹ ವನಕ್ಕೆ ಹೋಗಬೇಕು. ಸೇತುವೆಯ ಗೇಟು ಸಂಜೆಯ ಬಳಿಕ ಮುಚ್ಚಿರುತ್ತದೆ. ಮಂದಿರಕ್ಕೆ ಹೋಗುವ ಮಾರ್ಗ ಸೂಚಿ ಅಥವಾ ನಾಮಫಲಕ ಇಲ್ಲ. ಮಂದಿರದ ಪಕ್ಕದ ಹಳ್ಳಿಯವರಿಗೆ ಮಂದಿರದ ಪರಿಚಯವೇ ಇಲ್ಲ. ಈ ಕಾರಣಗಳಿಂದ ಭಕ್ತರ ಸಂಖ್ಯೆ ಇಲ್ಲಿ ವಿರಳವಾಗಿದೆ. ಶಾರದಾಪೀಠದ ಅಧಿಕಾರಿಗಳ ನಿರ್ಲಕ್ಷ್ಯವೂ ಇದಕ್ಕೆ ಕಾರಣವಿರಬಹುದು. ಈ ಬಗ್ಗೆ ಪೀಠದವರು ಗಮನಿಸುವುದು ಒಳ್ಳೆಯದು. ಅದು ಮಹಾಪುರುಷ ವೇದವ್ಯಾಸರಿಗೆ ನೀಡುವ ಗೌರವವೂ ಆಗಲಿದೆ.